ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು.

562(907)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲಾ ವಲಯದ ಸಕ್ಕರೆ ಕಾರ್ಖಾನೆ ಅರೆಯುವ ಕಬ್ಬು ಸಾಮರ್ಥ್ಯ ಎಷ್ಟು; ಕಳೆದ ವರ್ಷ ಎಲ್ಲಾ ಕಾರ್ಖಾನೆಗಳಿಂದ ಎಷ್ಟು ಕಬ್ಬು ಅರೆಯಲಾಗಿದೆ;

ಆ) ಕಳೆದ ವರ್ಷ ರಾಜ್ಯದಲ್ಲಿ ಎಲ್ಲಾ ವಲಯದ ಸಕ್ಕರೆ ಕಾರ್ಖಾನೆ ಉತ್ಪಾದಿಸಿದ ಸಕ್ಕರೆಯ ಪ್ರಮಾಣ ಎಷ್ಟು; ಈ ಪೈಕಿ ಮಾರಾಟವಾದ ಸಕ್ಕರೆ ಎಷ್ಟು; ಮಾರಾಟವಾಗದೆ ಉಳಿದಿರುವ ಸಕ್ಕರೆ ಎಷ್ಟು;

ಇ) ಈ ಕಾರ್ಖಾನೆಗಳಿಂದ ವಸೂಲಿ ಮಾಡಿದ ತೆರಿಗೆ ಎಷ್ಟು; ಈ ಕಾರ್ಖಾನೆಗಳಿಂದ ವಸೂಲಿ ಮಾಡಿದ ಲೆವಿ ಸಕ್ಕರೆ ಎಷ್ಟು;

ಶ್ರೀ ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯದಲ್ಲಿ 34 ಸಕ್ಕರೆ ಕಾರ್ಖಾನೆಗಳಿದ್ದು, ಆ ಪೈಕಿ 18 ಸಹಕಾರಿ ವಲಯದಲ್ಲಿ, 2 ಸಾರ್ವಜನಿಕ ವಲಯದಲ್ಲಿ, 1 ಜಂಟಿ ವಲಯದಲ್ಲಿ ಮತ್ತು 13 ಖಾಸಗಿ ವಲಯದಲ್ಲಿರುತ್ತವೆ. ಇವೆಲ್ಲವುಗಳ ಒಟ್ಟು ದಿನವಹಿ ಕಬ್ಬು ನುರಿಸುವ ಸಾಮರ್ಥ್ಯ 86,500 ಮೆ.ಟನ್‌ಗಳಾಗಿರುತ್ತದೆ. 1999-2000ನೇ ಸಾಲಿನಲ್ಲಿ 140.08 ಲಕ್ಷ ಮೆ.ಟನ್ ಕಬ್ಬು ನುರಿಸಿರುತ್ತವೆ.

ಆ) ಕಳೆದ ಸಾಲಿನಲ್ಲಿ ಅಂದರೆ 1999-2000ರಲ್ಲಿ ರಾಜ್ಯದ ಎಲ್ಲಾ ಕಾರ್ಯನಿರತ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿರುವ ಸಕ್ಕರೆ ಪ್ರಮಾಣ 15.37 ಲಕ್ಷ ಮೆ.ಟನ್ ಆಗಿರುತ್ತದೆ. ಹಿಂದಿನ ವರ್ಷದಿಂದ ಉಳಿದ ಸಕ್ಕರೆ 6.73 ಲಕ್ಷ ಟನ್ ಒಟ್ಟು ಸಕ್ಕರೆ ಪ್ರಮಾಣ 22.10 ಲಕ್ಷ ಟನ್. ಈ ಪೈಕಿ ಮಾರಾಟ ಮಾಡಿದ್ದು ಸುಮಾರು 12 ಲಕ್ಷ ಟನ್, ಬಾಕಿ ಉಳಿದಿದ್ದು ಸುಮಾರು 10 ಲಕ್ಷ ಟನ್.

ಇ) ಸಕ್ಕರೆ ಕಾರ್ಖಾನೆಗಳಿಂದ ನುರಿಸಿದ ಪ್ರತಿ ಟನ್ ಕಬ್ಬಿಗೆ ಇಳುವರಿ ಪ್ರಮಾಣ 10.5 ಶೇಕಡಕ್ಕಿಂತ ಕಡಿಮೆ ಇದ್ದಲ್ಲಿ, ರೂ.50 ರಂತೆ ಮತ್ತು ಇಳುವರಿ ಪ್ರಮಾಣ ಶೇಕಡ 10.5ಕ್ಕಿಂತ ಹೆಚ್ಚು ಇದ್ದಲ್ಲಿ ರೂ.65 ರಂತೆ ಖರೀದಿ ತೆರಿಗೆ ರೂಪದಲ್ಲಿ ಸಂಗ್ರಹಿಸಲಾಗುತ್ತಿದ್ದು, ಇದರ ಸರಾಸರಿ ಪ್ರತಿ ಟನ್ನಿಗೆ ಸುಮಾರು ರೂ.60ರಷ್ಟಾಗುವುದು. ಒಂದು ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು

ಸುಮಾರು 140 ಲಕ್ಷ ಟನ್ ಕಬ್ಬು ನುರಿಸಿದ್ದು, ಇದರಿಂದ ಅಂದಾಜು ರೂ.80 ಕೋಟಿ ಸಂಗ್ರಹಿಸಲಾಗುವುದು.

ಅದೇ ರೀತಿ ಲೆವಿ ಸಕ್ಕರೆ ಪ್ರಮಾಣವು ಉತ್ಪಾದನೆ ಶೇ.30ರಷ್ಟು ಇದ್ದು, ಇದರ ಒಟ್ಟು ಪ್ರಮಾಣವು 4.50 ಲಕ್ಷ ಟನ್ ಆಗುವುದು. ಇತ್ತೀಚೆಗೆ ಲೆವಿ ಸಕ್ಕರೆಯ ಪ್ರಮಾಣವನ್ನು ಶೇ.15ಕ್ಕೆ ಇಳಿಸಲಾಗಿರುತ್ತದೆ. ಇದು ಫೆಬ್ರವರಿ 2001ರಿಂದ ಜಾರಿಯಲ್ಲಿ ಬಂದಿರುತ್ತದೆ.

ಕೋಡೇರಿ ಮೀನುಗಾರಿಕಾ ಬಂದರುಗಳ ನಿರ್ಮಾಣದ ಕುರಿತು.

564(658)

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ) : ಮಾನ್ಯ ಮೀನುಗಾರಿಕಾ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಡೇರಿ ಮೀನುಗಾರಿಕೆ ಬಂದರು ಪ್ರಸ್ತಾವನೆಯನ್ನು ಕೈಬಿಡಲಾಗಿದೆ ಎಂಬ ವಿಷಯ ನಿಜವೆ: ಹೌದಾದಲ್ಲಿ ಅದಕ್ಕೆ ಕಾರಣಗಳೇನು?

ಆ) ಮೀನುಗಾರರ ಮತ್ತು ಮೀನುಗಾರಿಕೆಯ ಹಿತದೃಷ್ಟಿಯಿಂದ ಅದರ ಅಗತ್ಯ ಇಲ್ಲವೆ?

ಇ) ಮಲ್ಪೆ 2ನೇ ಹಂತದ ಬಂದರು ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿರುವುದು ನಿಜವೆ, ಹೌದಾದಲ್ಲಿ ಅದಕ್ಕೆ ಕಾರಣಗಳೇನು?

ಈ) ಗುತ್ತಿಗೆದಾರರಿಗೆ ಕಾಮಗಾರಿಯ ನಿಗದಿತ ಹಣ ಪಾವತಿಯು ಆಗಿದೆಯೇ ಇಲ್ಲವಾದಲ್ಲಿ ಬಾಕಿ ಮೊತ್ತ ಎಷ್ಟು ಕಾಮಗಾರಿಯನ್ನು ಯಾವಾಗಿನಿಂದ ತ್ವರಿತಗೊಳಿಸಲಾಗುವುದು.

ಶ್ರೀ ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ಕೋಡೇರಿಯಲ್ಲಿ ಮೀನುಗಾರಿಕೆ ಬಂದರನ್ನು ನಿರ್ಮಿಸುವುದು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಸಮಂಜಸವಲ್ಲದ್ದರಿಂದ ಸದರಿ ಬಂದರಿನ ನಿರ್ಮಾಣದ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.